
# ರಂಗಭೂಮಿಯಂತಲ್ಲ ಧಾರಾವಾಹಿ



**ಮಧುಸೂದನ ಕೆ.ಎಸ್.**
ಕಲರ್ಸ್‌ನ 'ತ್ರಿಪುರ ಸುಂದರಿ'ಯಲ್ಲಿ ಭಸ್ಮಾಸುರ

◆ **ಕಲಾವಿದರಾಗಿ ರೂಪುಗೊಂಡಿದ್ದು ಹೇಗೆ?**

ನಟನೆ ಎನ್ನುವುದು ಶಾಲಾ ದಿನಗಳಲ್ಲಿಯೇ ನನಗೆ ಮೈಗೂಡಿತು. 5ನೇ ತರಗತಿಯಲ್ಲಿ ಇದ್ದಾಗ ಮೊದಲು ನಾಟಕ ಆಡಿದೆ. ಗಾಯಕ ಆಗಬೇಕು ಎನ್ನುವ ಆಸೆ ನನಗಿತ್ತು. ನನ್ನ ಧ್ವನಿ ಆ ಆಸೆಗೆ ಸಾಥ್ ನೀಡಲಿಲ್ಲ. ಮಾತು ಚೆನ್ನಾಗಿದೆ ಎಂದು ಡೈಲಾಗ್ ಹೇಳಲು ಅದನ್ನು ಪಳಗಿಸಿದೆ. ಕಾಲೇಜಿಗೆ ಬರುವಷ್ಟರಲ್ಲಿ ಹವ್ಯಾಸಿ ರಂಗ ತಂಡಗಳಲ್ಲಿ ನಟಿಸಲು ಶುರುಮಾಡಿದೆ. ಆರೇಳು ವರ್ಷ ಬೇರೆ ಬೇರೆ ತಂಡಗಳಲ್ಲಿ ನಟಿಸಿದೆ. ನಂತರ ನನ್ನದೇ ಒಂದು ತಂಡವನ್ನು ಕಟ್ಟಿಕೊಂಡೆ. ಇಷ್ಟರ ಮಧ್ಯದಲ್ಲಿ ಕೆಲಸಕ್ಕೆ ಸೇರಿದೆ. ಕೆಲಸ ಬಿಟ್ಟು ನನ್ನ ಖುಷಿಗಾಗಿ ಫುಲ್ ಟೈಮ್ ಕಲಾವಿದನಾದೆ. ಆಗ ಜೀವನೋಪಾಯಕ್ಕೆ ಏನು ಎಂಬ ಪ್ರಶ್ನೆ ಎದುರಾಯಿತು. ಆಗ ಕಂಡ ಪರಿಹಾರ ಮಾರ್ಗವೇ ಟೀವಿ ಮತ್ತು ಸಿನಿಮಾ. ಇದುವರೆಗೆ 70 ಧಾರಾವಾಹಿಗಳು 30 ಸಿನಿಮಾಗಳಲ್ಲಿ ನಟಿಸಿದ್ದೇನೆ. ಈಗ ರಾಜ್ ಕುಮಾರ್ ಅವರ ಮೊಮ್ಮಗ ಯುವರಾಜಕುಮಾರ್ ಅವರ ಚೊಚ್ಚಲ ಸಿನಿಮಾ 'ಯುವ'ದಲ್ಲಿ ಅಭಿನಯಿಸುತ್ತಿದ್ದೇನೆ. 'ತ್ರಿಪುರ ಸುಂದರಿ'ಯಲ್ಲಿ ಭಸ್ಮಾಸುರನ ಪಾತ್ರವನ್ನು ಮಾಡುತ್ತಿದ್ದೇನೆ.

◆ **ಕಾನೂನಿನ ಬಲ ಇದ್ದರೂ ಟೀವಿಯಲ್ಲಿ ಪೊಲೀಸ್ ಪಾತ್ರಗಳು ಏಕೆ ಅಸಹಾಯಕ ಆಗುತ್ತವೆ?**

ಬಹುತೇಕ ಧಾರಾವಾಹಿ–ಸಿನಿಮಾಗಳಲ್ಲಿ ಅಸಹಾಯಕತೆ ಸಹಜವಾಗಿರುತ್ತದೆ. ಏಕೆ ಹೀಗಾಗುತ್ತದೆ ಅಂದರೆ, ಮೇಲಿನ ಅಧಿಕಾರಿಗಳ ಮಾತನ್ನು ಕೇಳಬೇಕಾಗುತ್ತದೆ. ಅದು ಬಿಟ್ಟು ನಿಷ್ಠೆಯಿಂದ ಕೆಲಸ ಮಾಡಲು ಹೊರಟರೆ ಒತ್ತಡಗಳು ಎದುರಾಗುತ್ತವೆ. ಸಮಾಜದಲ್ಲಿ ಇಂತಹ ಹಲವು ಮುಖಗಳನ್ನು ನೋಡಿರುತ್ತೇವೆ. ಅದನ್ನೇ ಇಲ್ಲೂ ತಂದಿರುತ್ತಾರೆ. ಇದು ಎಲ್ಲ ಕ್ಷೇತ್ರದಲ್ಲಿಯೂ ಇರುತ್ತದೆ. ಬಹುಶಃ ನ್ಯಾಯವನ್ನು ನೀಡಿದರೆ ಅಲ್ಲಿಗೆ ಕಥೆ ಮುಗಿಯುತ್ತದೆ. ಕಥೆ ಮುಂದುವರಿಯಬೇಕು ಎಂದರೆ ಅಡಚಣೆ ಇರಬೇಕಾಗುತ್ತದೆ. ನಾನು ಹೆಚ್ಚು ಪೊಲೀಸ್ ಅಧಿಕಾರಿಗಳ ಪಾತ್ರವನ್ನೇ ನಿರ್ವಹಿಸಿದ್ದೇನೆ. ಅದರಲ್ಲಿ 'ರಾಧಾ ರಮಣ', 'ಕನ್ನಡತಿ'ಯಲ್ಲಿ ಖಡಕ್ ಪೊಲೀಸ್ ಆಗಿದ್ದೆ. ಆ ಪಾತ್ರ ಪೊಲೀಸ್‌ಗಿರಿಗೆ ಗೆಲುವು ತಂದುಕೊಡುತ್ತದೆ. ಕಥೆಯನ್ನು ಪ್ರೇಕ್ಷಕ ಹೇಗೆ ನೋಡುತ್ತಾನೆ ಎನ್ನುವುದರ ಮೇಲೆ ಅದು ನಿರ್ಧಾರವಾಗುತ್ತದೆ.

◆ **ಧಾರಾವಾಹಿಯ ಕಥೆ ಇದ್ದಕ್ಕಿದ್ದಂತೆ ಏಕೆ ಕವಲು ದಾರಿಯಲ್ಲಿ ಸಾಗುತ್ತದೆ?**

ಒಂದು ಧಾರಾವಾಹಿಯ ಆರಂಭ ಅದ್ಭುತವಾಗಿಯೇ ಆಗುತ್ತದೆ. ಸಾಗುವ ಹಾದಿಯೂ ಚೆನ್ನಾಗಿರುತ್ತದೆ. ಅದು ಏಕೆ ತಿರುವು ಪಡೆಯುತ್ತದೆ ಎಂದರೆ ಎಲ್ಲೋ ವೀಕ್ಷಕನ ಬಯಕೆ ಅದಾಗಿರುತ್ತದೆ. ಜನರ ಸ್ಪಂದನೆಯ ಆಧಾರದಲ್ಲೇ ಈ ಬದಲಾವಣೆ ಆಗುತ್ತದೆ. ಉದಾಹರಣೆಗೆ ಅತ್ತೆ–ಸೊಸೆ ಇಲ್ಲವೇ ನಾಯಕ–ನಾಯಕಿಯ ಟ್ರ್ಯಾಕ್ ಬರುತ್ತಿರುತ್ತದೆ ಎಂದುಕೊಂಡರೆ. ಅದರಲ್ಲಿ ಪ್ರೇಕ್ಷಕನ ಗಮನ ಮತ್ತು ಬಯಕೆ ಏನಿದೆ ಎನ್ನುವುದರ ಮೇಲೆ ಕಥೆ ತಿರುವು ಪಡೆಯುತ್ತದೆ. ನಾಯಕ–ನಾಯಕಿ ಇಷ್ಟ ಆದರೆ ಆ ಟ್ರ್ಯಾಕ್‌ನಲ್ಲಿಯೇ ಕಥೆ ಮುಂದುವರಿಯುತ್ತದೆ. ಮೂಲವನ್ನು ಬಿಟ್ಟುಕೊಡದೆ ಕಥೆ ವಿಸ್ತಾರವಾಗುತ್ತದೆ. ಮುಖ್ಯಭೂಮಿಕೆಯಲ್ಲಿ ಜನರ ಇಷ್ಟದ ಭಾಗ ಇರುತ್ತದೆ. ಕೆಲವೊಮ್ಮೆ ಬೇರೆ ತಾಂತ್ರಿಕ ಕಾರಣಗಳೂ ಇದರ ಜೊತೆ ಸೇರಿ ಕಥೆಗಳು ಅಂತ್ಯ ಆಗಬಹುದು. ನಿಖರವಾಗಿ ಹೀಗೇ ಎಂದು ಹೇಳಲು ಆಗದಿದ್ದರು ಇದೂ ಒಂದು ಕಾರಣ. ಧಾರಾವಾಹಿ ಪ್ರೇಕ್ಷಕರಿಗಾಗಿ ಮಾಡುತ್ತೇವೆ. ಅವರ ಇಷ್ಟದ ವಿಷಯ ತೆಗೆದುಕೊಳ್ಳುತ್ತೇವೆ. ಕೆಲವೊಮ್ಮೆ ಇದ್ದಕ್ಕಿದ್ದಂತೆ ಹಾಸ್ಯದ ಸನ್ನಿವೇಶ ಸೃಷ್ಟಿಯಾದರೂ ಅದು ಪ್ರೇಕ್ಷಕರ ಕೋರಿಕೆಯೇ ಆಗಿರುತ್ತದೆ.

◆ **ಅನುಕರಣೆ ಮತ್ತು ಏಕರೂಪತೆ ಹೆಚ್ಚಿದೆ ಎನ್ನುವ ದೂರು ಇದೆ. ಸ್ವತಂತ್ರವಾಗಿ ಒಂದು ಕಥೆಯನ್ನು ಏಕೆ ಕೊಡಲು ಆಗುವುದಿಲ್ಲ?**

ಇದಕ್ಕೆ ಉದಾಹರಣೆ ಕೊಡುವುದಾದರೆ, ಒಂದು ಕಿಲೋಮೀಟರ್‌ನಲ್ಲಿ ಹತ್ತು ಹೋಟೆಲ್ ಸಿಗುತ್ತವೆ. ಬೆಳಿಗ್ಗೆ ಎಲ್ಲ ಕಡೆ ಇಡ್ಲಿ ವಡೆಯೇ ಸಿಗುತ್ತದೆ. ಆದರೂ ಇಡ್ಲಿ ವಡೆಗೆ ಇದೇ ಹೋಟೆಲ್‌ಗೆ ಹೋಗಬೇಕು ಎನ್ನುವ ಮನೋಭಾವದಲ್ಲಿ ಪ್ರತಿ ಹೋಟೆಲ್‌ಗೂ ಗ್ರಾಹಕ ಹೋಗುತ್ತಾನೆ. ಎಲ್ಲ ಹೋಟೆಲ್ ಕೂಡ ತಮ್ಮದೇ ಆದ ಗ್ರಾಹಕರನ್ನು ಹೊಂದಿರುತ್ತವೆ. ಒಬ್ಬೊಬ್ಬರು ಒಂದೊಂದು ರುಚಿಗೆ ಹೊಂದಿಕೊಂಡಿರುತ್ತಾರೆ. ಯಾವುದೇ ಧಾರಾವಾಹಿ ಇದ್ದರೂ ಅದು ಪ್ರೇಮ, ಅತ್ತೆ–ಸೊಸೆ ಸಂಬಂಧ, ಯುವಕ–ಯುವತಿಯರ ಜೀವನ ಶೈಲಿ ಹೀಗೆ ಕೆಲವು ಸನ್ನಿವೇಶಗಳ ಜೊತೆ ಹೆಣೆದುಕೊಳ್ಳುತ್ತದೆ. ಅದನ್ನೇ ಜನ ಬಯಸುವುದು ಕೂಡ. ಹಾಗಾಗಿ ಒಂದೊಂದು ಧಾರಾವಾಹಿಗೆ ಅದರದೇ ವೀಕ್ಷಕ ವರ್ಗ ಹುಟ್ಟಿಕೊಳ್ಳುತ್ತದೆ. ಸವಿಯುವ ಸಹೃದಯ ಇದೇ ಹೋಟೆಲ್ ಎಂದು ಹೇಗೆ ನಿರ್ಧರಿಸುತ್ತಾನೆಯೋ ಹಾಗೆಯೇ ಧಾರಾವಾಹಿ ಕೂಡ. ಕಂಟೆಂಟ್‌ನಲ್ಲಿ ಒಂದಿಷ್ಟು ಸಾಮ್ಯತೆ ಇದ್ದರೂ ನಿರ್ವಹಣೆ ಭಿನ್ನವಾಗಿರುತ್ತದೆ. ಸ್ಥಳ, ಸನ್ನಿವೇಶಗಳನ್ನು ಭಿನ್ನವಾಗಿ ನಿರೂಪಿಸಬೇಕಾಗುತ್ತದೆ. ಕಥೆಯನ್ನು ನೀಡುವ ಶೈಲಿಯಲ್ಲಿ ಭಿನ್ನತೆಯನ್ನು ಕಾಣಬಹುದು.

◆ **ವಾಸ್ತವ ನೆಲೆಗಟ್ಟಿನಲ್ಲಿ ಕಥೆಯನ್ನು ನಿರೂಪಿಸಲು ಏಕೆ ಸಾಧ್ಯ ಆಗುತ್ತಿಲ್ಲ?**

ರಂಗಭೂಮಿಯಂತೆ ಟೀವಿ ಸಿನಿಮಾಗಳಲ್ಲಿ ಅದನ್ನು ನಿರೀಕ್ಷೆ ಮಾಡಲು ಆಗುವುದಿಲ್ಲ. ರಂಗಭೂಮಿ ಒಂದು ಚಳವಳಿ, ಸಮಾಜದ ನಡವಳಿಕೆಗಳನ್ನು ಪ್ರಶ್ನಿಸುವಲ್ಲಿ ಆ ವೇದಿಕೆ ಯಶಸ್ವಿಯಾಗಿದೆ. ರಂಗಭೂಮಿಯಲ್ಲಿ ಪ್ರಸ್ತುತಪಡಿಸುವ ಹೆಚ್ಚಿನ ವಿಷಯಗಳು ಸಮಾಜಕ್ಕೆ ಸಂಬಂಧಿಸಿರುತ್ತವೆ. ಜಾತಿ, ಲಿಂಗ, ಜನಾಂಗೀಯ ಅಸಮಾನತೆ ಸೇರಿದಂತೆ ಸಮಾಜದ ಧೋರಣೆಗೆ ಸಂಬಂಧಿಸಿದಂತೆ ನಾಟಕ ರೂಪಿತವಾಗುತ್ತದೆ. ಹಾಗಾಗಿ ಅಲ್ಲಿ ವಾಸ್ತವದ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವ ಪ್ರಯತ್ನ ಮಾಡಲಾಗುತ್ತದೆ. ಅದಕ್ಕೆ ಅಲ್ಲಿ ಆ ಸ್ವಾತಂತ್ರ್ಯ ಇರುತ್ತದೆ. ಧಾರಾವಾಹಿಯಲ್ಲಿ ಹಾಗಿರುವುದಿಲ್ಲ. ನಟರು ತಾಂತ್ರಿಕ ವರ್ಗ ಸೇರಿದಂತೆ ನೂರಾರು ಜನರ ಬದುಕಿನ ಪ್ರಶ್ನೆ ಇಲ್ಲಿದೆ. ಹಾಗೆಯೇ ಪ್ರೇಕ್ಷಕ ದಿನವಿಡೀ ದುಡಿದು ಬಂದು ರಾತ್ರಿ ಸ್ವಲ್ಪ ಮನರಂಜನೆ ಬಯಸುತ್ತಾನೆ. ಅವನಿಗೆ ಅದನ್ನು ಬಿಟ್ಟು ಬೋಧನೆ ಕೊಡ್ತೀವಿ ಅಂದರೆ ಅದು ಅವನಿಗೆ ಇಷ್ಟ ಆಗಲ್ಲ. ಮನೋರಂಜನೆಯ ದೃಷ್ಟಿಯಲ್ಲಿಯೇ ಸಾಕಷ್ಟು ಪ್ರಯತ್ನ ನಡೆಯುತ್ತದೆ.

■ **ರಾಘವೇಂದ್ರ ಕೆ.**